# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 683 (627)
ಸದಸ್ಯರ ಹೆಸರು : ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 18-08-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಪದವಿ ಪೂರ್ವ ಇಲಾಖೆಯ ನಿರ್ದೇಶಕರು ದಿನಾಂಕ: 8 ಡಿಸೆಂಬರ್, 2023 ರಂದು ಹೊರಡಿಸಿದ ಅಧಿಸೂಚನೆಗನುಸಾರವಾಗಿ 400 ಉಪನ್ಯಾಸಕರ ರಹಸ್ಯ ವರದಿಗಳನ್ನು ತರಿಸಿಕೊಂಡು 80 ಉಪನ್ಯಾಸಕರನ್ನು ಹೊರಗಿಟ್ಟು 287 ಉಪನ್ಯಾಸಕರಿಗೆ ಪ್ರಾಚಾರ್ಯರಾಗಿ ಮುಂಬಡ್ತಿ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು<br>ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇದ್ದ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲು ಅರ್ಹ ಉಪನ್ಯಾಸಕರಿಂದ ಅಗತ್ಯ ದಸ್ತಾವೇಜುಗಳನ್ನು ಪಡೆಯಲಾಗಿದ್ದು, ದಿನಾಂಕ: 12-03-2024 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಆ ದಿನಾಂಕಕ್ಕೆ ಖಾಲಿ ಇರುವ ಮತ್ತು ಮುಂಬರುವ 06 ತಿಂಗಳಲ್ಲಿ ಖಾಲಿಯಾಗಲಿರುವ ಹುದ್ದೆಗಳನ್ನೊಳಗೊಂಡಂತೆ ಒಟ್ಟು 302 ಹುದ್ದೆಗಳನ್ನು ಮಾತ್ರ ಪರಿಗಣಿಸಿ, ಅರ್ಹರಿರುವ ಉಪನ್ಯಾಸಕರಿಗೆ ಡಿ.ಪಿ.ಸಿ ಯನ್ನು ನಡೆಸಲಾಗಿರುತ್ತದೆ. ಅದರಂತೆ, ದಿನಾಂಕ: 15-05-2025 ರಂದು 287 ಉಪನ್ಯಾಸಕರಿಗೆ ಮುಂಬಡ್ತಿ ಆದೇಶವನ್ನು ಹೊರಡಿಸಿ, ದಿನಾಂಕ: 16-05-2025 ರಂದು ಕೌನ್ಸೆಲಿಂಗ್‌ನ್ನು ನಡೆಸಿ, ಸ್ಥಳನಿಯುಕ್ತಿಗೊಳಿಸಲಾಗಿದೆ. ಇದರಲ್ಲಿ 65 ಉಪನ್ಯಾಸಕರು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ) ನೇಮಕಾತಿ ನಿಯಮಗಳು 1977 ರ ನಿಯಮ 4 (a) ರಂತೆ ಬಡ್ತಿಯನ್ನು ಮುಂದೂಡಿರುತ್ತಾರೆ. |
| ಆ) | ಈ 80 ಉಪನ್ಯಾಸಕರು ಅರ್ಹತೆ ಹೊಂದಿದ್ದರೂ ಪ್ರಾಚಾರ್ಯರಾಗಿ ಮುಂಬಡ್ತಿ ನೀಡದಿರಲು ಕಾರಣಗಳೇನು; | |
| ಇ) | ನಿರಂತರವಾಗಿ ಸುಮಾರು 28 ವರ್ಷಗಳಿಂದ ಯಾವುದೇ ಮುಂಬಡ್ತಿ ಇಲ್ಲದೆ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಮುಂಬಡ್ತಿ ನೀಡದಿರಲು ಕಾರಣವೇನು; | ಶಾಲಾ ಶಿಕ್ಷಣ ಇಲಾಖೆಯಲ್ಲಿ (ಪದವಿ ಪೂರ್ವ) ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಉಪ ನಿರ್ದೇಶಕರ ಹುದ್ದೆಗೆ ಬಡ್ತಿಯಿಂದ ತೆರವಾಗುವ ಪ್ರಾಂಶುಪಾಲರ ಹುದ್ದೆಗಳನ್ನು ಅರ್ಹ ಉಪನ್ಯಾಸಕರಿಗೆ ಕಾಲಕಾಲಕ್ಕೆ ಇಲ್ಲಿಯವರೆಗೆ ಅಂದರೆ, 2025ರವರೆಗೆ ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳನ್ವಯ ಮುಂಬಡ್ತಿ ನೀಡಲಾಗಿರುತ್ತದೆ. |
| (ಈ) | 302 ಪ್ರಾಚಾರ್ಯ ಹುದ್ದೆಗಳಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು 221 ಹುದ್ದೆಗಳಿಗೆ (66 ಉಪನ್ಯಾಸಕರು | ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡುವ ಕುರಿತು ದಿನಾಂಕ:12-03-2024 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಆ |

| | | |
|---|---|---|
| | ಬಡ್ತಿ ಮುಂದೂಡಿಕೆ/ಫೋರ್ಗೋ ಮಾಡಿದ್ದಾರೆ) ಬಡ್ತಿ ನೀಡಲಾಗಿದ್ದು, ಇನ್ನುಳಿದವರಿಗೆ ಮುಂಬಡ್ತಿ ನೀಡಲು ಅವಕಾಶ ಮಾಡಿ ಕೊಡಲಾಗುವುದೇ: | ದಿನಾಂಕಕ್ಕೆ ಖಾಲಿ ಇರುವ ಮತ್ತು ಮುಂಬರುವ 06 ತಿಂಗಳಲ್ಲಿ ಖಾಲಿಯಾಗಲಿರುವ ಹುದ್ದೆಗಳನ್ನೊಳಗೊಂಡಂತೆ ಒಟ್ಟು 302 ಹುದ್ದೆಗಳನ್ನು ಮಾತ್ರ ಪರಿಗಣಿಸಿ, ಅರ್ಹರಿರುವ ಉಪನ್ಯಾಸಕರಿಗೆ ಡಿ.ಪಿ.ಸಿ ಯನ್ನು ನಡೆಸಲಾಗಿರುತ್ತದೆ. ಅದರಂತೆ, ದಿನಾಂಕ: 15-05-2025 ರಂದು 287 ಉಪನ್ಯಾಸಕರಿಗೆ ಮುಂಬಡ್ತಿ ಆದೇಶವನ್ನು ಹೊರಡಿಸಿ, ದಿನಾಂಕ: 16-05-2025 ರಂದು ಕೌನ್ಸೆಲಿಂಗ್‌ನ್ನು ನಡೆಸಿ, ಸ್ಥಳನಿಯುಕ್ತಿಗೊಳಿಸಲಾಗಿದೆ. ಇದರಲ್ಲಿ 65 ಉಪನ್ಯಾಸಕರು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ) ನೇಮಕಾತಿ ನಿಯಮಗಳು 1977 ರ ನಿಯಮ 4 (a) ರಂತೆ ಬಡ್ತಿಯನ್ನು ಮುಂದೂಡಿರುತ್ತಾರೆ.<br><br>ಪ್ರಸ್ತುತ, 214 ಬಡ್ತಿ ಕೋಟಾದ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳಿಗೆ ಬಡ್ತಿ ನೀಡಲು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರಿಗೆ, ಸ್ಥಾನಪನ್ನ ಬಡ್ತಿ ನೀಡುವ ಮೂಲಕ ಭರ್ತಿ ಮಾಡುವ ಸಂಬಂಧ ನಿರ್ದೇಶಕರಿಂದ ಪ್ರಸ್ತಾವನೆ ಸ್ವೀಕೃತವಾದ ಕೂಡಲೇ ನಿಯಮಾನುಸಾರ ಅಗತ್ಯ ಕ್ರಮ ವಹಿಸಲಾಗುವುದು. |
| (ಉ) | ಈಗಾಗಲೇ 80 ಉಪನ್ಯಾಸಕರ ರಹಸ್ಯ ವರದಿಗಳು ಇಲಾಖೆ ತರಿಸಿಕೊಂಡಿದ್ದು, ತಕ್ಷಣವೇ ಅವರಿಗೆ ಇಲಾಖಾ ಬಡ್ತಿ ಸಮಿತಿಯನ್ವಯ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳುವುದೇ ? | ಪ್ರಸ್ತುತ, ಬಡ್ತಿ ಮುಂದೂಡಿರುವ, ಉಪ ನಿರ್ದೇಶಕರ ಹುದ್ದೆಗೆ ಬಡ್ತಿ ಹೊಂದಿರುವ, ನಿವೃತ್ತಿಯಿಂದ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ 214 ಹುದ್ದೆಗಳಿಗೆ ಮತ್ತು ಮುಂಬರುವ 06 ತಿಂಗಳಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳನ್ವಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರಿಗೆ, ಸ್ಥಾನಪನ್ನ ಬಡ್ತಿ ನೀಡುವ ಮೂಲಕ ಭರ್ತಿ ಮಾಡುವ ಸಂಬಂಧ ನಿರ್ದೇಶಕರಿಂದ ಪ್ರಸ್ತಾವನೆ ಸ್ವೀಕೃತವಾದ ಕೂಡಲೇ ನಿಯಮಾನುಸಾರ ಅಗತ್ಯ ಕ್ರಮ ವಹಿಸಲಾಗುವುದು. |

ಸಂಖ್ಯೆ: ಇಪಿ 281 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು